
CENTRAL UNIVERSITY OF KARNATAKA





# Central Library

## Central University of Karnataka, Kalaburgi

**Good Morning CUK !**

# News Headings

Education

Science & Technology

Nutrition and Health

Business, Finance & Marketing

Economic News

Event and Celebration

Art & Architecture

Sports & Cultural

Editorial News

# EDUCATION

# 'Order creating confusion among schools, parents'

CONTINUED FROM PAGE 1

VIOLATIONS that attract disqualification include running schools without registration, teaching unauthorised curriculum, changing curriculum from state to CBSE Board, allowing additional sections or grades without prior approval, changing the medium of instruction without approval, conducting classes for different boards (CBSE, ICSE, IB) without affiliation and starting departments without knowledge of the competent authority. Strict actions will also be taken against institutions teaching state curriculum but using other textbooks in classrooms, despite warning, the circular stated.

Minister for School Education and Literacy Madhu Bangarappa had revealed last year that the state has over 1,600 illegal schools. He had warned that such illegal schools would be closed in a phased manner and students shifted to other schools.

Criticising the latest circular, the Associated Managements of English Medium Schools In Karnataka (KAMS) charged that the department does not have any clarity on its orders and it is creating only a sense of fear and confusion among schools and parents. KAMS Secretary Shashi Kumar D feared that the circular could lead to rampant corruption in the department.

KAMS questioned as to what will happen to schools that have appealed before the HC or Appellate Authority has issued interim stay orders. Kumar said the rule specifies that one year should be given to the schools for 'safe exist' and cannot be done between academic years. But the government is going back on its word.

# Newspaper clippings adorn walls of MLC's residence

## Dinesh Gooli Gowda has put up over 2,500 newspaper cuttings on his statements published in dailies in the State

**Nagesh Prabhu**
BENGALURU

Ministers and legislators are, generally, dependent on libraries of the State secretariat to get paper clippings of their press conferences or press statements held in the past.

But first-time MLC Dinesh Gooli Gowda of the Congress has maintained his statements published in Kannada and English papers in a unique way. Instead of keeping them in files, he has designed walls of his two-room residence at the Legislators' Home in Bengaluru with paper clippings.



Newspaper clippings on the walls of Congress MLC Dinesh Gooli Gowda's official residence at the Legislators' Home in Bengaluru. SPECIAL ARRANGEMENT

The MLC elected from the Local Bodies Constituency in Mandya district in January 2021 has put up on the walls more than 2,500 newspaper cuttings on his statements published in dailies in the State. "Instead of talking, visitors look at walls and read newspaper clippings. This has helped to reduce noise inside the room. It also helped visitors to gain knowledge of various subjects," he quipped on why he chose the design.

On the walls of the official residence (120-121), one can find clippings related to sugarcane growers, Cauvery water row, Mysuru Bengaluru highway, Mekedatu project, agroforestry, wildlife, and procurement prices for paddy and milk etc. His speeches delivered in the Legislative Council also figure on the wall.

"Instead of hanging photographs, paintings, or calendars, I have used walls to display all my press statements issued since I became a member of the Upper House," the MLC said.


Mr. Gowda, who earlier served as media coordinator to former KPCC president G. Parameshwara (now Home Minister) and former Cooperation Minister and BJP MLA S.T. Somashekar, has kept his interest in "news gathering" in this manner. He is known to provide inputs to Chief Minister Siddaramaiah, KPCC chief and Deputy Chief Minister D.K. Shivakumar, and other Ministers when they address the media.

# Education, skilling key to turn a mega economy: NITI Aayog CEO

**KR Srivats**
New Delhi

BVR Subrahmanyam, CEO of NITI Aayog, emphasised that India needs to significantly ramp up its skilling initiatives to achieve its goal of evolving into a developed nation with a multi-trillion-dollar GDP.

"If we have to simplify the challenge for India in becoming a $10-trillion or $20-trillion or $30-trillion economy, I will reduce the entire challenge to one area — education and skilling," Subrahmanyam said at the India Banking Conclave 2024, jointly organised by NITI Aayog and the Council for International Economic Understanding (CIEU) in Delhi.



BVR Subrahmanyam, CEO, NITI Aayog

Subrahmanyam highlighted that India's workforce needs to be the best in the world and that is the only way the country can capitalise on the opportunities in the future. He noted that education and skilling were the main reasons why one part of India was doing well while some others were not performing at the same levels. "The more you invest in people in terms of education and skilling, the more will be the payoff. That is fundamental. Our new education policy has brought in a lot of features for this purpose", he said.

**NEED TO EXPAND**

Subrahmanyam also noted that it would be incorrect to go with the notion that education and skilling are needed only for new entrants (young people in 15-19 years). "A chap who is operating a lathe machine may get a CNC machine or robot tomorrow, then he should know how to do that.

**BANKING SECTOR**

The country needs as much skilling as it needs reskilling and upskilling. Government skilling programmes have to account for that and be massively expanded", Subrahmanyam said.

On banks, Subrahmanyam stressed the need for a banking sector of different size and scale if India was looking at $10-trillion or $30-trillion economy. "How many Indian banks are in the global league? There should be at least 10-15 Indian banks in the top hundred in the world. That's kind of scale we need. Are we planning for that?" he said.

The day is not far off when the CEO of a bank would be a technical person and not a banker. "Financial part you can engage someone to do it. But the tech part you cannot borrow from somebody else. Talent profile has to change and tech has to be integrated with banking", he said.

Incumbents in banking sector must change themselves to engage with fintechs.

### ಪಿಯು ಡಿಡಿ ಶಿವಶರಣಪ್ಪ ಮುಳೆಗಾಂವ ಅನಿಸಿಕೆ | ಶ್ರೀಗುರು ಕಾಲೇಜು ವಿದ್ಯಾರ್ಥಿಗಳ ಬೀಳ್ಕೊಡುಗೆ

# ಜೀವನದಲ್ಲಿ ಉತ್ತೀರ್ಣಕ್ಕೆ ಕೌಶಲ ಇರಲಿ

**ವಿಜಯವಾಣಿ ಸುದ್ದಿಜಾಲ** ಕಲಬುರಗಿ

ಭವಿಷ್ಯದ ನಾಗರಿಕರಾದ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪಾಸಾಗುವುದು ಸುಲಭ. ಆದರೆ ಜೀವನದ ಪರೀಕ್ಷೆಯಲ್ಲಿ ಪಾಸಾಗುವುದು ಕಷ್ಟ ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಶಿವಶರಣಪ್ಪ ಮುಳೆಗಾಂವ ಹೇಳಿದರು.

ನಗರದ ನೀಲಾಂಬಿಕಾ ಕಲ್ಯಾಣ ಮಂಟಪದಲ್ಲಿ ಶನಿವಾರ ಏರ್ಪಡಿಸಿದ್ದ ಮಾತೋಶ್ರೀ ಕಲ್ಯಾಣಿ ಸ್ಮಾರಕ ಶಿಕ್ಷಣ ಸಂಸ್ಥೆಯ ಶ್ರೀಗುರು ಸ್ವತಂತ್ರ ವಿಜ್ಞಾನ ಪದವಿಪೂರ್ವ ಕಾಲೇಜಿನ ದ್ವಿತೀಯ ಪಿಯು ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದಲ್ಲಿ ಮಾತನಾಡಿದ ಅವರು, ಧನಾತ್ಮಕ ಕೌಶಲ ಅಳವಡಿಸಿಕೊಂಡರೆ ಜೀವನದಲ್ಲೂ ಉತ್ತೀರ್ಣರಾಗಲು ಸಾಧ್ಯ ಎಂದರು.

ಸಮಾಜಕ್ಕೆ ಉತ್ತಮ ಕೊಡುಗೆ ನೀಡಿ ಭವಿಷ್ಯದ ಉಜ್ವಲ ಭಾರತ ನಿರ್ಮಾಣಕ್ಕೆ ಶ್ರಮಿಸಬೇಕು. ಸಾಧನೆ ಹಾದಿಯಲ್ಲಿ ಶಕ್ತಿ ಹೀನರಿಗೆ ದೇವರೂ ಕೈಹಿಡಿಯುವುದಿಲ್ಲ. ಶಕ್ತಿವಂತರು ಯಶಸ್ಸು ಸಾಧಿಸುತ್ತಾರೆ. ಹೆತ್ತವರು, ಗುರುಗಳನ್ನು ಗೌರವಿಸಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಕಲ್ಯಾಣ ಕರ್ನಾಟಕದಲ್ಲಿ ಶೈಕ್ಷಣಿಕ ಬುನಾದಿ ಹಾಕಿಕೊಟ್ಟ ದಿ.ಪ್ರೊ.ಎ.ವೈ. ನಾಯ್ಕ್ ಕೊಡುಗೆ ಅಪಾರ ಎಂದು ಸ್ಮರಿಸಿದರು.

ಪ್ರಾಂಶುಪಾಲ ವಿದ್ಯಾಸಾಗರ ಗೋಗಿ ಮಾತನಾಡಿ, ನೀವು ಕಲಿತ ಜ್ಞಾನ, ವಿದ್ಯೆ ಸಂದರ್ಭಕ್ಕನುಸಾರ ಬಳಸಿಕೊಂಡು ಉತ್ತಮ ಬದುಕು ರೂಪಿಸಿಕೊಳ್ಳಬೇಕು. ತಂದೆ-ತಾಯಿ ಕನಸು ನನಸಾಗಲು ಶ್ರಮಿಸಬೇಕು ಎಂದು ಕಿವಿಮಾತು ಹೇಳಿದರು.

ಸಂಸ್ಥೆ ಅಧ್ಯಕ್ಷೆ ನಳಿನಿ ಎ.ನಾಯ್ಕ್ ಮಾತನಾಡಿ, ವಿದ್ಯಾರ್ಥಿಗಳು ಏಕಾಗ್ರತೆಯಿಂದ ಓದಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ತರಬೇಕು. ಅದಕ್ಕೆ ಪೂರಕವಾದ ಎಲ್ಲ ಶೈಕ್ಷಣಿಕ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು. ಕಾರ್ಯದರ್ಶಿ ನಿತಿನ್ ನಾಯ್ಕ್, ಆಡಳಿತಾಧಿಕಾರಿ ನೇಹಾ ನಾಯ್ಕ್, ಆಡಳಿತ ಮಂಡಳಿ ಸದಸ್ಯ ಗುರುರಾಜ ನಾಯ್ಕ್ ಇತರರಿದ್ದರು.

ವಿಜಯವಾಣಿ ಚಿತ್ರ



ಕಲಬುರಗಿಯಲ್ಲಿ ಶನಿವಾರ ಏರ್ಪಡಿಸಿದ್ದ ಶ್ರೀಗುರು ಸ್ವತಂತ್ರ ವಿಜ್ಞಾನ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವನ್ನು ಡಿಡಿಪಿಯು ಶಿವಶರಣಪ್ಪ ಮುಳೆಗಾಂವ ಉದ್ಘಾಟಿಸಿದರು. ನಳಿನಿ ಎ.ನಾಯ್ಕ್, ನಿತಿನ್ ನಾಯ್ಕ್, ನೇಹಾ ನಾಯ್ಕ್, ವಿದ್ಯಾಸಾಗರ ಗೋಗಿ ಇದ್ದರು.

**ಶ್ರೀಗುರು ಸಂಸ್ಥೆಯು ಗುಣಮಟ್ಟದ ಶಿಕ್ಷಣ ನೀಡುತ್ತಿದ್ದು, ವಿದ್ಯಾರ್ಥಿಗಳಿಗೆ ಪೂರಕ ಎಲ್ಲ ಸೌಲಭ್ಯ, ಅನುಭವಿ, ಪರಿಣತ ಉಪನ್ಯಾಸ ಬಳಗವನ್ನು ಹೊಂದಿದೆ. ವಿದ್ಯಾರ್ಥಿಗಳು ಎಲ್ಲ ಸೌಲಭ್ಯ ಪಡೆದು ಸಾಧಕರಾಗಿ ಹೊರಹೊಮ್ಮಬೇಕು.**

| ನಿತಿನ್ ನಾಯ್ಕ್ ಕಾರ್ಯದರ್ಶಿ ಮಾತೋಶ್ರೀ ಕಲ್ಯಾಣಿ ಸ್ಮಾರಕ ಶಿಕ್ಷಣ ಸಂಸ್ಥೆ

ಶಿಕ್ಷಣ ತಜ್ಞ ಡಾ.ಕರ್ಜಗಿ ಸಲಹೆ | ನೂತನ ವಿದ್ಯಾಲಯ ಕಾಲೇಜಿನಲ್ಲಿ ಪಿಯುಸಿ ನಂತರ ಮುಂದೇನು ಕಾರ್ಯಾಗಾರ

# ಎಲ್ಲರೊಳಗೊಂದಾಗುವ ಕೋರ್ಸ್ ಬೇಡ

■ ವಿಜಯವಾಣಿ ಸುದ್ದಿಜಾಲ ಕಲಬುರಗಿ

ದ್ವಿತೀಯ ಪಿಯುಸಿ ನಂತರ ಇಂಜಿನಿಯರಿಂಗ್, ಎಂಬಿಬಿಎಸ್‌ನಂತಹ ಎಲ್ಲರೂ ಆಯ್ಕೆ ಮಾಡುವ ವಿಷಯದ ಬದಲು ತಮಗಿಷ್ಟವಾದ ಕೋರ್ಸ್ ಓದಬೇಕು. ಸ್ನೇಹಿತ, ಸಂಬಂಧಿಕರು ಮಾಡುತ್ತಾರೆ ಎಂದು ಇಷ್ಟದ ವಿರುದ್ಧ ಅಧ್ಯಯನದಲ್ಲಿ ತೊಡಗಿದರೆ ಯಶಸ್ಸು ದೊರೆತರೂ ನೆಮ್ಮದಿ ಸಿಗಲ್ಲ ಎಂದು ಖ್ಯಾತ ಶಿಕ್ಷಣ ತಜ್ಞ ಡಾ.ಗುರುರಾಜ ಕರ್ಜಗಿ ಹೇಳಿದರು.

ನೂತನ ವಿದ್ಯಾಲಯದ ಅನಂತರಾವ ದೇಶಮುಖ ಸಭಾಗೃಹದಲ್ಲಿ ನೂತನ ವಿದ್ಯಾಲಯ ಸಂಸ್ಥೆ, ವಿಜಯವಾಣಿ ದಿನಪತ್ರಿಕೆ ಸಹಯೋಗದಡಿ ಪಿಯುಸಿ ವಿದ್ಯಾರ್ಥಿಗಳಿಗಾಗಿ ಶನಿವಾರ ಏರ್ಪಡಿಸಿದ್ದ 'ಪಿಯುಸಿ ನಂತರ ಮುಂದೇನು?' ಕಾರ್ಯಾಗಾರ ಉದ್ಘಾಟಿಸಿದ ಬಳಿಕ ಅವರು ಉಪನ್ಯಾಸ ನೀಡಿದರು.

ಜೀವ ಉಳಿಯಬೇಕಾದರೆ ಜಿಂಕೆ ಓಡಬೇಕು. ಹೊಟ್ಟೆ ತುಂಬಬೇಕಾದರೆ ಸಿಂಹ ಓಡಬೇಕು. ಓಟ ಅನಿವಾರ್ಯ. ಓಡದಿದ್ದರೆ ಜೀವ ಉಳಿಯಲ್ಲ. ಕಾಲಕ್ಕೆ ತಕ್ಕಂತೆ ಪಿಯು ವಿದ್ಯಾರ್ಥಿಗಳು ವಿಷಯ ಆಯ್ಕೆಯಲ್ಲಿ ಮನಸ್ಸಿನ ಮಾತು ಕೇಳಬೇಕು. ನೂರಾರು ಹೊಸ ಕೋರ್ಸ್‌ಗಳಿದ್ದು, ಒಂದೆರಡು ವಿಷಯಕ್ಕೆ ಜೋತು ಬೀಳಬಾರದು ಎಂದು ಸಲಹೆ ನೀಡಿದರು.

ಎನ್‌ವಿ ಸಂಸ್ಥೆ ಅಧ್ಯಕ್ಷ ಡಾ.ಗೌತಮ ಆರ್.ಜಹಾಗಿರದಾರ ಮಾತನಾಡಿ, ವಿದ್ಯಾರ್ಥಿಗಳಿಗೆ ಡಾ.ಗುರುರಾಜ ಕರ್ಜಗಿ ವರದಾನವಾಗಿ ಬಂದಿದ್ದಾರೆ. ಶಿಕ್ಷಣ ತಜ್ಞರ ಸಹಯೋಗ, ಮಾರ್ಗದರ್ಶನದಿಂದ ಮಾತ್ರ ವಿದ್ಯಾರ್ಥಿಗಳ ಭವಿಷ್ಯ ರೂಪಿಸಲು ಸಾಧ್ಯ ಎಂದರು.

ವಿಜಯವಾಣಿ ಸ್ಥಾನಿಕ ಸಂಪಾದಕ ಬಾಬುರಾವ ಯಡ್ರಾಮಿ ಮಾತನಾಡಿ, ವಿದ್ಯಾರ್ಥಿಗಳ ಅಧ್ಯಯನಕ್ಕೆ ಪೂರಕವಾಗಿ ವಿಜಯವಾಣಿ ಪತ್ರಿಕೆ ಕೆಲಸ ಮಾಡುತ್ತಿದೆ. ವಿಆರ್‌ಎಲ್ ಸಮೂಹ ಸಂಸ್ಥೆಗಳ ಸಿಎಂಡಿ ಡಾ.ವಿಜಯ ಸಂಕೇಶ್ವರ, ಎಂಡಿ ಡಾ.ಆನಂದ ಸಂಕೇಶ್ವರ ಮಾರ್ಗದರ್ಶನದಲ್ಲಿ ನಿರಂತರ ಸಮಾಜಪರ ಕೆಲಸ ಮಾಡಲಾಗುತ್ತಿದೆ. ಅಧ್ಯಯನಕ್ಕಾಗಿಯೇ ವಿದ್ಯಾರ್ಥಿ ಉದ್ಯೋಗ ಮಿತ್ರ ಸಂಚಿಕೆ ಪ್ರಕಟಿಸಲಾಗುತ್ತಿದೆ. ಅದನ್ನು ಓದಿ ಫಲಿತಾಂಶದಲ್ಲಿ ಸುಧಾರಣೆ ಕಂಡುಕೊಳ್ಳಬೇಕು ಎಂದು ಹೇಳಿದರು.

ಪ್ರಮುಖರಾದ ಗೋವಿಂದ ಪೂಜಾರ, ಗುರುಮಧ್ವಾಚಾರ್ಯ ನವಲಿ, ಜಿತೇಂದ್ರ ಕೋತಳಿಕರ್, ಮಹೇಶ ಬಡಿಗೇರ, ಗುರುರಾಜ ದಂಡಾಪುರ, ಶ್ರೀಕಾಂತ ಪಂಡಿತ, ಕಾಶೀನಾಥ ಪಾಂಚಾಳ, ಡಾ.ವಿಷ್ಣು ಗುಂಡಗುರ್ತಿ, ಸತೀಶ ದೇಶಮುಖ ಇತರರಿದ್ದರು. ಶ್ರೀಕಾಂತ ಎಖೇಳ್ಳಿಕರ್ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ಡಾ.ರಾಘವೇಂದ್ರ ಕುಲಕರ್ಣಿ ನಿರೂಪಣೆ ಮಾಡಿದರು, ಭಾರತಿ ಎಸ್.ಆರ್. ವಂದಿಸಿದರು.

**ವಿಜಯವಾಣಿ**
**ಮಾಧ್ಯಮ ಸಹಯೋಗ**

## ಒಂದಿಷ್ಟು ಸಲಹೆಗಳು

- 40 ನಿಮಿಷಕ್ಕಿಂತ ಜಾಸ್ತಿ ನಿರಂತರ ಓದು ಬೇಡ
- ಕೂಡುವ ಸ್ಥಳ ಶಿಸ್ತಿನದಾಗಿರಲಿ
- ಬ್ಲ್ಯಾಕ್ ಬೋರ್ಡ್‌ನಲ್ಲಿ ಬರೆದು ಪ್ರ್ಯಾಕ್ಟಿಸ್ ಮಾಡಿ
- ಓದು, ಸಮಯಕ್ಕೆ ಓದು, ಮರು ಓದು, ಓದಿದ್ದು ಬರೆ, ಮತ್ತೊಬ್ಬರಿಗೆ ಹೇಳು
- ಒತ್ತಡಮುಕ್ತರಾಗಿರಿ
- ಪರೀಕ್ಷೆಯಲ್ಲಿ ಬೇರೆಯವರ ಮುಖ ನೋಡಬೇಡಿ
- ಸ್ಪಷ್ಟತೆಯೊಂದಿಗೆ ಮುಂದೆ ಸಾಗಿ
- ಹೆತ್ತವರನ್ನು ನಿತ್ಯ ಗೌರವಿಸಿದರೆ ಆಶೀರ್ವಾದ ಜತೆಗಿರುತ್ತದೆ
- ಚರ್ಚಿಸಿ ಕೋರ್ಸ್ ಬದಲಾವಣೆ ಮಾಡಿಕೊಳ್ಳಿ



ವಿಜಯವಾಣಿ ಚಿತ್ರಗಳು

ನೂತನ ವಿದ್ಯಾಲಯ ಕಾಲೇಜಿನಲ್ಲಿ ಏರ್ಪಡಿಸಿದ್ದ ಪಿಯುಸಿ ನಂತರ ಮುಂದೇನು ಕಾರ್ಯಾಗಾರವನ್ನು ಡಾ.ಗುರುರಾಜ ಕರ್ಜಗಿ ಉದ್ಘಾಟಿಸಿದರು. ಡಾ.ಗೌತಮ ಜಹಾಗೀರದಾರ, ಬಾಬುರಾವ ಯಡ್ರಾಮಿ, ಶ್ರೀಕಾಂತ ಎಖೇಳ್ಳಿಕರ್ ಇತರರಿದ್ದರು.

## ಹೊಸ ಅವಕಾಶಗಳ ಆಗರ

ಪಿಯುಸಿ ನಂತರ ಹೊಸ ಕೋರ್ಸ್, ವಿಭಿನ್ನ ವಿಷಯ, ಉತ್ತಮ ಸಂಬಳ ದೊರೆಯುವ, ಉದ್ಯಮಪತಿಗಳಾಗುವ ಉತ್ತಮ ಅವಕಾಶವಿದೆ. ಬಹುತೇಕರು ಕಲಾ, ವಿಜ್ಞಾನ, ವಾಣಿಜ್ಯ ಸಾಮಾನ್ಯ ವಿಷಯಗಳ ನಂತರ ವೈದ್ಯಕೀಯ, ಇಂಜಿನಿಯರಿಂಗ್‌ನತ್ತ ಚಿತ್ತ ಹರಿಸುತ್ತಾರೆ. ಆದರೆ ಪ್ರಸ್ತುತ ಉತ್ತಮ ಶಿಕ್ಷಕರ ಕೊರತೆ ಬಹಳಷ್ಟಿದೆ. ಕಲಾ ವಿಭಾಗದವರಿಗೆ ಡಿ.ಇಡಿ, ಎಂಎಸ್ ಡಬ್ಲ್ಯು, ಎಲ್‌ಎಲ್‌ಬಿ, ಫ್ಯಾಶನ್ ಡಿಸೈನಿಂಗ್, ಇಂಟೀರಿಯರ್ ಡಿಸೈನಿಂಗ್, ಬಿಬಿಎ, ವಿದೇಶಿ ಭಾಷೆ, ಕಾಲ್ ಸೆಂಟರ್, ಬಿಎ ಆರ್ಕಿಟೆಕ್ಟ್, ಐಎಎಸ್, ಐಪಿಎಸ್, ಕೆಎಎಸ್‌ನಂತಹ ಭಿನ್ನ-ವಿಭಿನ್ನ ವಿಷಯಗಳನ್ನು ಅಧ್ಯಯನಕ್ಕೆ ಆಯ್ದುಕೊಳ್ಳಬಹುದು. ವಿಜ್ಞಾನದ ವಿದ್ಯಾರ್ಥಿಗಳು ಎಂಬಿಬಿಎಸ್, ಇಂಜಿನಿಯರಿಂಗ್ ಜತೆಗೆ ಬಿಎಸ್ಸಿ ಡೇರಿ ಟೆಕ್ನಾಲಜಿ, ಫಾರ್ಮಸಿ, ಬಿಟೆಕ್ ಇನ್ ಅಗ್ರಿಕಲ್ಚರ್, ಪಶು ಸಂಗೋಪನೆ, ಆಯುರ್ವೇದ, ಹೋಮಿಯೋಪಥಿ, ನರ್ಸಿಂಗ್, ಬಿಎಂಎಲ್‌ಟಿ ಕೋರ್ಸ್‌ಗಳ ಚಿತ್ತ ಹರಿಸಬಹುದು. ವಾಯುಯಾನ, ಗಣಿಗಾರಿಕೆ, ಪೆಟ್ರೋಲಿಯಂ, ಭೂವಿಜ್ಞಾನ, ಪ್ಲಾಸ್ಟಿಕ್ ಆ್ಯಂಡ್ ಮೌಲ್ಡ್ ತಂತ್ರಜ್ಞಾನ, ಟೂಲ್ ಆ್ಯಂಡ್ ಡೈ ಮೇಕಿಂಗ್, ಪ್ಯಾಕೇಜಿಂಗ್ ಟೆಕ್ನಾಲಜಿ, ಫೋರೆನಿಕ್ಸ್ ಸೈನ್ಸ್, ಆಭರಣ ವಿನ್ಯಾಸ, ವಜ್ರ ವಿನ್ಯಾಸ, ಚಿತ್ರಕಲೆ, ಇಲೆಕ್ಟ್ರಾನಿಕ್ ಜರ್ನಲಿಸಂ, ಷೇರು ಮಾರುಕಟ್ಟೆ, ಹೂಡಿಕೆದಾರ ಪ್ರತಿನಿಧಿ ಸೇರಿ ನೂರಾರು ವಿಭಿನ್ನ ಕೋರ್ಸ್‌ಗಳಿವೆ. ವಿದ್ಯಾರ್ಥಿಗಳು ಈ ಕೋರ್ಸ್‌ಗಳ ಬಗ್ಗೆ ತಿಳಿದುಕೊಂಡು ಉಜ್ವಲ ಭವಿಷ್ಯಕ್ಕೆ ಪೂರಕವಾದ ವಿಷಯದ ಅಧ್ಯಯನಕ್ಕೆ ಮುಂದಾಗಬಹುದು.

> ಪಿಯು ವಿದ್ಯಾರ್ಥಿಗಳ ಮುಂದಿನ ನಡೆ ಅತ್ಯಂತ ಪ್ರಜ್ಞಾಪೂರ್ವಕವಾಗಿ ಕೂಡಿರಬೇಕು. ಆದ್ದರಿಂದಲೇ ಕಾರ್ಯಾಗಾರ ಏರ್ಪಡಿಸಿ ಮಾರ್ಗದರ್ಶನ ನೀಡುತ್ತಿದ್ದು, ಉತ್ತಮ ನಿರ್ಧಾರದೊಂದಿಗೆ ಉನ್ನತ ಜೀವನಕ್ಕೆ ಮುನ್ನುಡಿ ಬರೆಯಬೇಕು. ಎನ್‌ವಿ ಸಂಸ್ಥೆ ವಿದ್ಯಾರ್ಥಿ ಪೂರಕ ವಾತಾವರಣ ನಿರ್ಮಿಸಿದೆ.
>
> | ಡಾ.ಗೌತಮ ಜಹಾಗಿರದಾರ
> ಅಧ್ಯಕ್ಷ, ನೂತನ ವಿದ್ಯಾಲಯ ಸಂಸ್ಥೆ

> ಬಹುತೇಕ ವಿದ್ಯಾರ್ಥಿಗಳು ಹಾಗೂ ಪಾಲಕರು ವಿಷಯ ಆಯ್ಕೆ ಬಗ್ಗೆ ತೀರ್ಮಾನವೇ ಮಾಡುವುದಿಲ್ಲ. ಕೋರ್ಸ್ ಆಯ್ಕೆ ಮುನ್ನ ಏನು ಮಾಡಬೇಕು? ನಾನು ಮಾಡಬಲ್ಲೆಯಾ? ಕೋರ್ಸ್‌ನಲ್ಲಿ ರಿಸ್ಕ್ ಏನಿದೆ? ಪರ್ಯಾಯ ಏನು ಎಂಬುದನ್ನು ಅರಿತು ಮುಂದಡಿ ಇಡಬೇಕು.
>
> | ಡಾ.ಗುರುರಾಜ ಕರ್ಜಗಿ
> ಖ್ಯಾತ ಶಿಕ್ಷಣ ತಜ್ಞ

## ಕಠಿಣ ಪರಿಶ್ರಮದಿಂದ ಯಶಸ್ಸು ಸಾಧ್ಯ

ಕಠಿಣ ಪರಿಶ್ರಮ, ನಿರಂತರ ಪ್ರಯತ್ನ, ಬದ್ಧತೆಯೊಂದಿಗೆ ಮುನ್ನಡೆದಾಗ ಯಶಸ್ಸು ಸಾಧ್ಯ ಎಂದು ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಉಪ ನಿರ್ದೇಶಕ ಶಿವಶರಣಪ್ಪ ಮುಳೆಗಾಂವ್ ಹೇಳಿದರು. ಕಾರ್ಯಾಗಾರದ ಸಮಾರೋಪದಲ್ಲಿ ಮಾತನಾಡಿದ ಅವರು, ಭವಿಷ್ಯ ರೂಪಿಸಿಕೊಳ್ಳುವಲ್ಲಿ ಪಿಯುಸಿ ಹಂತ ತಳಪಾಯ. ಹೀಗಾಗಿ ವಿದ್ಯಾರ್ಥಿಗಳು ಈ ಹಂತವನ್ನು ಗಂಭೀರ ಪರಿಗಣಿಸುವ ಮೂಲಕ ಉತ್ತಮ ಆಯ್ಕೆಗೆ ಮುಂದಾಗಬೇಕು. ದೈಹಿಕ, ಮಾನಸಿಕವಾಗಿ ಸದೃಢರಾಗಿರಬೇಕು. ಸ್ಪರ್ಧಾ ಮನೋಭಾವ ಬೆಳೆಸಿಕೊಳ್ಳಬೇಕು. ದೊಡ್ಡ ಕನಸು ಕಾಣಿ. ಆದರೆ ಆತ್ಮಸ್ಥೈರ್ಯ ಕಳೆದುಕೊಳ್ಳಬೇಡಿ. ನಿಮಗೆ ನೀವೇ ಹೀರೋಗಳಾಗಿ. ಅಪಾರ ಅವಕಾಶಗಳು ಲಭ್ಯ ಇವೆ. ಚಂಚಲ ಮನಸ್ಸು ದೂರ ಇರಿಸಿ ಎಂದರು. ಸಂಸ್ಥೆ ಸದಸ್ಯ ಪ್ರಮೋದ ನಾಗೂರ, ಉಪಾಧ್ಯಕ್ಷೆ ಸುಧಾ ಕರಲಗಿಕರ್ ಮಾತನಾಡಿದರು. ವಿಜಯವಾಣಿ ಮುಖ್ಯ ವರದಿಗಾರ ಜಯತೀರ್ಥ ಪಾಟೀಲ, ಪ್ರಾಚಾರ್ಯ ಶ್ರೀಕಾಂತ ಎಖೇಳ್ಳಿಕರ್, ಐಕ್ಯುಎಸಿ ಸಂಚಾಲಕ ಗೋವಿಂದ ಪೂಜಾರ್, ರಾಘವೇಂದ್ರ ಕುಲಕರ್ಣಿ, ಜಿತೇಂದ್ರ ಕೊಥಳೀಕರ್, ಸುದರ್ಶನ ಓಂಕಾರ್, ಶ್ರೀಮಂತ, ಲಕ್ಷ್ಮಣ, ಮಹೇಶ ಬಿ. ಇತರರಿದ್ದರು. ಉಪನ್ಯಾಸಕ ಸೂರ್ಯಕಾಂತ ಸುಜ್ಯಾತ್ ಸ್ವಾಗತಿಸಿದರು. ವಿಷ್ಣು ಗುಂಡಗುರ್ತಿ ನಿರೂಪಣೆ ಮಾಡಿದರು. ಡಾ.ದಯಾನಂದ ಶಾಸ್ತ್ರಿ ವಂದಿಸಿದರು. ಮಹೇಶ ಬಡಿಗೇರ ನೇತೃತ್ವದ ಸಂಗೀತ ವಿಭಾಗದ ತಂಡ ಪ್ರಾರ್ಥನಾಗೀತೆ ಪ್ರಸ್ತುತಪಡಿಸಿತು.



ಕಾರ್ಯಾಗಾರದಲ್ಲಿ ಪಿಯು ಡಿಡಿ ಶಿವಶರಣಪ್ಪ ಮುಳೆಗಾಂವ್ ಅವರನ್ನು ಗೋವಿಂದ ಪೂಜಾರ್ ಸತ್ಕರಿಸಿದರು. ಸುಧಾ ಕರಲಗಿಕರ್, ಪ್ರಮೋದ ನಾಗೂರ, ಡಾ.ಶ್ರೀಕಾಂತ, ಜಯತೀರ್ಥ ಪಾಟೀಲ್ ಇದ್ದರು.

### ಪ್ರೊ.ಮನೋಹರ ಹೇಳಿಕೆ | ಕೇಂದ್ರೀಯ ವಿವಿಯಲ್ಲಿ ರಾಷ್ಟ್ರೀಯ ಸಮ್ಮೇಳನ ಶುರು

# ಪ್ರಗತಿ ಜತೆ ವೈವಿಧ್ಯತೆ ಸಂಪರ್ಕ

■ ವಿಜಯವಾಣಿ ಸುದ್ದಿಜಾಲ ಕಲಬುರಗಿ

ಸಮಾಜ ಕಾರ್ಯ ಮತ್ತು ವೈವಿಧ್ಯತೆಯು ಸಾಮಾಜಿಕ ಅಭಿವೃದ್ಧಿಯೊಂದಿಗೆ ಸಂಪರ್ಕ ಹೊಂದಿದೆ ಎಂದು ಆಸ್ಟ್ರೇಲಿಯಾ ಚಾರ್ಲ್ಸ್ ಸ್ಟರ್ಟ್ ವಿಶ್ವವಿದ್ಯಾಲಯದ ಪ್ರೊ.ಮನೋಹರ ಪವಾರ್ ಹೇಳಿದರು.

ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಕಲಬುರಗಿ ಪ್ರಾದೇಶಿಕ ಕೇಂದ್ರದ ಸಹಯೋಗದಡಿ ಕಡಗಂಚಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಸಮಾಜಕಾರ್ಯ ವಿಭಾಗ ಆಯೋಜಿಸಿರುವ ಎರಡು ದಿನದ ಸಮಾಜ ಕಾರ್ಯ ಮತ್ತು ವೈವಿಧ್ಯತೆ ಬದಲಾವಣೆ ರೂವಾರಿ ವಿಷಯ ಕುರಿತ ರಾಷ್ಟ್ರೀಯ ಸಮ್ಮೇಳನ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮುಖ್ಯ ಭಾಷಣ ಮಾಡಿದರು.

ಕಾರ್ಯಸ್ಥಳದ ವೈವಿಧ್ಯತೆಗೆ ಸಾಮಾಜಿಕ ಕಾರ್ಯ ಕೊಡುಗೆ ಅಪಾರ. ಇದು ವೈವಿಧ್ಯತೆಗೆ ಸಂಬಂಧಿಸಿದ ಸಮಸ್ಯೆ ಪರಿಹರಿಸುತ್ತದೆ. ಸಮಾಜವನ್ನು ವಿಶಾಲಗೊಳಿಸುತ್ತದೆ. ವೈವಿಧ್ಯತೆ ಸಾಧಿಸುವ ಹಾದಿಯಲ್ಲಿ ಮೂರು ಪ್ರಮುಖ ಅಡೆತಡೆಗಳಿವೆ. ಉದಾಹರಣೆಗೆ ಆಳವಾಗಿ ಬೇರೂರಿರುವ ಪೂರ್ವಾಗ್ರಹ, ಅಸಂಗತತೆ ಅಥವಾ ಮಾತು ಮತ್ತು ಕಾರ್ಯಗಳ ನಡುವಿನ ಅಂತರ ಮತ್ತು ನಾಯಕರು, ವ್ಯವಸ್ಥೆ ಮತ್ತು ರಚನೆಗಳು ಜವಾಬ್ದಾರಿ ಹೊಂದಿರುವುದಿಲ್ಲ. ಕ್ರಿಯೆಗಳಲ್ಲಿ ಬದ್ಧವಾಗಿರುವುದಿಲ್ಲ ಎಂದು ಹೇಳಿದರು. ಸಿಯುಕೆ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಉದ್ಘಾಟಿಸಿದರು. ಇಟಲಿ ಬಿಕೊಕಾ ಮಿಲಾನೋ ಇಂಟರ್ ನ್ಯಾಷನಲ್ ಅಸೋಸಿಯೇಷನ್ ಆಫ್ ಸ್ಕೂಲ್ಸ್ ಆಫ್ ಸೋಷಿಯಲ್ ವರ್ಕ್ ಅಧ್ಯಕ್ಷ ಪ್ರೊ.ಅನ್ನಮರಿಯಾ ಕ್ಯಾಂಪನಿನಿ ಮಾತನಾಡಿದರು.

ಸಿಯುಕೆ ಕುಲಸಚಿವ ಪ್ರೊ.ಆರ್.ಆರ್. ಬಿರಾದಾರ್, ಡೀನ್ ಪ್ರೊ.ಚನ್ನವೀರ ಆರ್. ಎಂ., ವಿಟಿಯು ಪ್ರಾದೇಶಿಕ ಕೇಂದ್ರ ನಿರ್ದೇಶಕ ಡಾ.ಬಸವರಾಜ ಗಾದಗೆ ಉಪಸ್ಥಿತರಿದ್ದರು. ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ.ಶ್ರೀನಿವಾಸ ಡಿ. ಪ್ರಾಸ್ತಾವಿಕ ಮಾತನಾಡಿದರು. ಸಮಾಜಕಾರ್ಯ ವಿಭಾಗದ ಮುಖ್ಯಸ್ಥೆ ಪ್ರೊ.ಪವಿತ್ರಾ ಆಲೂರ ಸ್ವಾಗತಿಸಿದರು. ಡಾ.ಎಂ. ಶಿವಮೂರ್ತಿ ನಿರೂಪಣೆ ಮಾಡಿದರು. ಡಾ.ಲಕ್ಷ್ಮಣ ಜಿ ವಂದಿಸಿದರು. ತುಮಕೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ವೈ.ಎಸ್. ಸಿದ್ದೇಗೌಡ ಅವರು ಡಾ.ಶ್ರೀನಿವಾಸ ರಚಿಸಿದ ಆರು ಪುಸ್ತಕ ಮತ್ತು ಸಮಾಜಕಾರ್ಯ ವಿಭಾಗದ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಸಮ್ಮೇಳನದ ಭಾಗವಾಗಿ 14 ಗುಂಪು ಚರ್ಚೆಗಳೊಂದಿಗೆ ಎರಡು ಮುಖ್ಯ ಮತ್ತು 6 ಸಮನಾಂತರ ಅಧಿವೇಶನ ಜರುಗಲಿವೆ.



ಕಲಬುರಗಿ ಸಿಯುಕೆಯಲ್ಲಿ ಸಮಾಜ ಕಾರ್ಯ ಅಧ್ಯಯನ ವಿಭಾಗ ಆಯೋಜಿಸಿರುವ ರಾಷ್ಟ್ರೀಯ ಸಮ್ಮೇಳನಕ್ಕೆ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಶುಕ್ರವಾರ ಚಾಲನೆ ನೀಡಿದರು. ಪ್ರೊ.ಮನೋಹರ ಪವಾರ್, ಡಾ.ಶ್ರೀನಿವಾಸ ಡಿ., ಪ್ರೊ.ವೈ.ಎಸ್.ಸಿದ್ದೇಗೌಡ, ಪ್ರೊ.ಆರ್.ಆರ್.ಬಿರಾದಾರ್, ಪ್ರೊ.ಚನ್ನವೀರ ಇತರರಿದ್ದರು.


ಶ್ರೀ ಡಾ.ಪಟ್ಟದ್ದೇವರು ಹೇಳಿಕೆ | 21, 27, 28ರಂದು ಪ್ರವೇಶ ಪರೀಕ್ಷೆ

# ಬಡ ಮಕ್ಕಳಿಗೆ ಗೋಲ್ಡನ್ ಸ್ಕಾಲರ್‌ಶಿಪ್

■ ವಿಜಯವಾಣಿ ಸುದ್ದಿಜಾಲ ಭಾಲ್ಕಿ

ಗ್ರಾಮೀಣ ಭಾಗದ ಬಡ ಪ್ರತಿಭಾವಂತ ವಿದ್ಯಾರ್ಥಿಗಳು ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್‌ನ ಗುರುಕುಲ ಗೋಲ್ಡನ್ ಸ್ಕಾಲರ್‌ಶಿಪ್ ಯೋಜನೆ ಸದುಪಯೋಗ ಪಡೆದುಕೊಳ್ಳಬೇಕು ಎಂದು ವಿದ್ಯಾಪೀಠ ಟ್ರಸ್ಟ್ ಅಧ್ಯಕ್ಷರಾದ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಹೇಳಿದರು.

ಬಡ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಮತ್ತು ಪ್ರತಿಭಾವಂತರಿಗೆ ಅವಕಾಶ ಕಲ್ಪಿಸುವ ಸದುದ್ದೇಶದಿಂದ ಆರು ವರ್ಷದಿಂದ ಈ ಯೋಜನೆ ಜಾರಿಯಲ್ಲಿದೆ. ಪ್ರಸ್ತುತ ಶೈಕ್ಷಣಿಕ ವರ್ಷ ಎಸ್ಸೆಸ್ಸೆಲ್ಸಿ ಓದುತ್ತಿರುವ ವಿದ್ಯಾರ್ಥಿಗಳು ಸ್ಕಾಲರ್‌ಶಿಪ್ ಪ್ರವೇಶ ಪರೀಕ್ಷೆ ಬರೆಯಬಹುದಾಗಿದೆ ಎಂದು ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಡಾ.ಬಸವಲಿಂಗ ಪಟ್ಟದ್ದೇವರು

ಕರಡ್ಯಾಳ ಚನ್ನಬಸವೇಶ್ವರ ವಸತಿ ವಿಜ್ಞಾನ ಪದವಿಪೂರ್ವ ಕಾಲೇಜಿನಲ್ಲಿ ಜ.21, 27 ಮತ್ತು 28ರಂದು ಪ್ರವೇಶ ಪರೀಕ್ಷೆ ನಡೆಯಲಿದೆ. ಇದರಲ್ಲಿ ಉತ್ತಮ ಅಂಕ ಪಡೆಯುವ ನೂರು ವಿದ್ಯಾರ್ಥಿಗಳಿಗೆ ಮುಂದಿನ ಎರಡು ವರ್ಷದ ಪಿಯುಸಿ ಶಿಕ್ಷಣ ಉಚಿತ ನೀಡಲಾಗುತ್ತದೆ. ಕ್ರಮವಾಗಿ ಅತ್ಯುತ್ತಮ ಅಂಕ ಗಳಿಸುವ 25 ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ವಸತಿ ಮತ್ತು ಕೋಚಿಂಗ್, ನಂತರದ ಅಂಕ ಪಡೆಯುವ 75 ವಿದ್ಯಾರ್ಥಿಗಳಿಗೆ ವಸತಿರಹಿತ ಶಿಕ್ಷಣ ಮತ್ತು ಕೋಚಿಂಗ್ ನೀಡುವುದಾಗಿ ಹೇಳಿದರು. ಸಂಸ್ಥಾನದ ಪೀಠಾಧಿಪತಿ ಶ್ರೀ ಗುರುಬಸವ ಪಟ್ಟದ್ದೇವರು ಮಾತನಾಡಿದರು. ಶ್ರೀ ಮಹಾಲಿಂಗ ಸ್ವಾಮೀಜಿ, ಪ್ರಾಚಾರ್ಯ ಬಸವರಾಜ ಮೊಳಕೀರೆ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸದಸ್ಯ ಶಶಿಧರ ಕೋಸಂಬೆ, ಮೋಹನರಡ್ಡಿ ಇದ್ದರು.

## 6 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳ ನೋಂದಣಿ

**ಗುರುಕುಲ ಗೋಲ್ಡನ್ ಸ್ಕಾಲರ್‌ಶಿಪ್ ಪ್ರವೇಶ ಪರೀಕ್ಷೆಗೆ ಈಗಾಗಲೇ 6000ಕ್ಕೂ ಅಧಿಕ ವಿದ್ಯಾರ್ಥಿಗಳು ನೋಂದಣಿ ಮಾಡಿಸಿದ್ದಾರೆ. ಈ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ವಿದ್ಯಾರ್ಥಿಗಳು ಕ್ಯೂ ಆರ್ ಕೋಡ್ ಮೂಲಕ ಅಥವಾ ಗುರುಕುಲಕ್ಕೆ ಆಗಮಿಸಿ ನೋಂದಣಿ ಮಾಡಿಕೊಳ್ಳಬಹುದು ಎಂದು ಪ್ರಾಚಾರ್ಯ ಬಸವರಾಜ ಮೊಳಕೀರೆ ಹೇಳಿದರು**

## ಶ್ರೀಗುರು ಕಾಲೇಜು ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ

# ‘ಧನಾತ್ಮಕ ಕೌಶಲ ಅಳವಡಿಸಿಕೊಳ್ಳಿ’

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಧನಾತ್ಮಕ ಕೌಶಲವನ್ನು ಅಳವಡಿಸಿಕೊಂಡು ಮುಂದುವರಿಯುವವರು ಜೀವನದ ಪರೀಕ್ಷೆಯಲ್ಲಿಯೂ ಪಾಸಾಗುತ್ತಾರೆ’ ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಪ್ರೊ. ಶಿವಶರಣಪ್ಪ ಮುಳೆಗಾಂವ್ ಹೇಳಿದರು.

ನಗರದ ನೀಲಾಂಬಿಕಾ ಕಲ್ಯಾಣ ಮಂಟಪದಲ್ಲಿ ಶನಿವಾರ ಮಾತೋಶ್ರೀ ಕಲ್ಯಾಣಿ ಸ್ಮಾರಕ ಶಿಕ್ಷಣ ಸಂಸ್ಥೆಯ ಶ್ರೀಗುರು ಸ್ವತಂತ್ರ ವಿಜ್ಞಾನ ಪದವಿಪೂರ್ವ ಕಾಲೇಜಿನ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಸಾಧನೆಯ ಹಾದಿಯಲ್ಲಿ ಶಕ್ತಿಹೀನರಾದವರಿಗೆ ದೇವರು ಸಹ ಕೈಹಿಡಿಯುವುದಿಲ್ಲ. ಶಕ್ತಿವಂತರು ಯಶಸ್ಸು ಸಾಧಿಸುತ್ತಾರೆ. ಅದಕ್ಕಾಗಿ ಶಕ್ತಿಯೇ ಜೀವನ ಎಂಬ ತತ್ವವನ್ನು ಅರಿತು ಮುನ್ನುಗ್ಗಬೇಕು. ತಂದೆ-ತಾಯಿ ಶ್ರಮ ಮತ್ತು ತ್ಯಾಗಕ್ಕೆ ಗೌರವ ಕೊಡಬೇಕು’ ಎಂದರು.



ಕಲಬುರಗಿಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಶ್ರೀಗುರು ಸ್ವತಂತ್ರ ವಿಜ್ಞಾನ ಪದವಿಪೂರ್ವ ಕಾಲೇಜಿನ ದ್ವಿತೀಯ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ವಿದ್ಯಾರ್ಥಿನಿಯರು ನೃತ್ಯ ಪ್ರದರ್ಶಿಸಿದರು

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷೆ ನಳಿನಿ ಎ.ನಾಯ್ಕ್ ಮಾತನಾಡಿ, ‘ವಿದ್ಯಾರ್ಥಿಗಳು ಏಕಾಗ್ರತೆಯಿಂದ ಓದಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ತರಬೇಕು. ಅದಕ್ಕೆ ಪೂರಕವಾದ ಎಲ್ಲ ರೀತಿಯ ಶೈಕ್ಷಣಿಕ ಸಹಕಾರ, ಸೌಲಭ್ಯ ನೀಡಲಾಗುವುದು’ ಎಂದು ಭರವಸೆ ನೀಡಿದರು.

ಪ್ರಾಂಶುಪಾಲ ವಿದ್ಯಾಸಾಗರ ಎಂ.ಗೋಗಿ ಮಾತನಾಡಿ, ‘ಕಲಿತ ವಿದ್ಯೆಯನ್ನು ಸಂದರ್ಭಕ್ಕನುಸಾರವಾಗಿ ಉಪಯೋಗಿಸಿ ಉತ್ತಮ ಬದುಕು ರೂಪಿಸಿಕೊಳ್ಳಬೇಕು. ತಂದೆ- ತಾಯಿ ಹಾಗೂ ನಿಮ್ಮ ಕನಸು ನನಸಾಗಿಸಲು ಸದಾ ಸ್ಪರ್ಧಾತ್ಮಕ ಪ್ರಯತ್ನ ಮಾಡಬೇಕು’ ಎಂದರು.

ಕಾರ್ಯದರ್ಶಿ ನಿತಿನ್ ಎ.ನಾಯ್ಕ್, ಆಡಳಿತಾಧಿಕಾರಿ ನೇಹಾ ನಿತಿನ್ ನಾಯ್ಕ್, ಸದಸ್ಯ ಗುರುರಾಜ ಎ.ನಾಯ್ಕ್ ಪಾಲ್ಗೊಂಡಿದ್ದರು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

## ಪ್ರತಿ ತಿಂಗಳು ₹ 5 ಸಾವಿರ ಮೊತ್ತದ ಪುಸ್ತಕ ಖರೀದಿಸಿ ಅರಿವು ಕೇಂದ್ರಗಳಿಗೆ ವಿತರಣೆ

# ಪುಸ್ತಕ ಸಂಸ್ಕೃತಿ ಪಸರಿಸುವ ತಾ.ಪಂ. ಇಒ

• ಮನೋಜಕುಮಾರ್ ಗುದ್ದಿ

ಕಲಬುರಗಿ: ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯುವುದು ವಿರಳ. ಇದಕ್ಕೆ ಕಾರಣ ಅಗತ್ಯವಿರುವ ಸ್ಪರ್ಧಾಪುಸ್ತಕಗಳು ಗ್ರಾಮಗಳಲ್ಲಿ ದೊರೆಯದಿರುವುದು. ಇದನ್ನು ನೀಗಿಸುವ ನಿಟ್ಟಿನಲ್ಲಿ ಆಳಂದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಮಾನಪ್ಪ ಕಟ್ಟಿಮನಿ ಅವರು ಪ್ರತಿ ತಿಂಗಳು ₹ 5 ಸಾವಿರ ಖರ್ಚು ಮಾಡಿ ಪುಸ್ತಕಗಳನ್ನು ಖರೀದಿಸಿ ಕೊಡುತ್ತಿದ್ದಾರೆ.

ಈಗಾಗಲೇ ಕಳೆದ ಎರಡು ತಿಂಗಳಿಂದ ಆಳಂದ ತಾಲ್ಲೂಕಿನ ಸರಸಂಬಾ ಮತ್ತು ಸಾವಳೇಶ್ವರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅರಿವು ಕೇಂದ್ರ (ಗ್ರಾಮೀಣ ಗ್ರಂಥಾಲಯ)ಗಳಿಗೆ



ಆಳಂದ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಮಾನಪ್ಪ ಕಟ್ಟಿಮನಿ ಅವರು ಗ್ರಾಮ ಪಂಚಾಯಿತಿಯೊಂದಕ್ಕೆ ಪುಸ್ತಕಗಳನ್ನು ದೇಣಿಗೆಯಾಗಿ ನೀಡಿದರು

ಸ್ಪರ್ಧಾತ್ಮಕ ಪರೀಕ್ಷೆಗೆ ಸಹಕಾರಿಯಾಗುವ ₹ 5 ಸಾವಿರ ಮೌಲ್ಯದ 12 ಪುಸ್ತಕಗಳನ್ನು ನೀಡಿದ್ದಾರೆ. ಜನವರಿ ತಿಂಗಳಲ್ಲಿ ಧುತ್ತರಗಾಂವ ಗ್ರಾಮದ ಅರಿವು ಕೇಂದ್ರಕ್ಕೆ ಮತ್ತೆ ಪುಸ್ತಗಳನ್ನು ನೀಡಲಿದ್ದಾರೆ.

ಈ ಕುರಿತು **'ಪ್ರಜಾವಾಣಿ'**ಯೊಂದಿಗೆ ತಮ್ಮ ಯೋಜನೆಯ ವಿವರವನ್ನು ಹಂಚಿಕೊಂಡ ಮಾನಪ್ಪ ಕಟ್ಟಿಮನಿ ಅವರು, 'ಗ್ರಂಥಾಲಯ ಇಲಾಖೆ ವ್ಯಾಪ್ತಿಯಲ್ಲಿದ್ದ ಗ್ರಂಥಾಲಯಗಳನ್ನು ಇತ್ತೀಚೆಗಷ್ಟೇ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆಯ ವ್ಯಾಪ್ತಿಗೆ ವಹಿಸಲಾಗಿದೆ. ಪ್ರತಿ ಗ್ರಂಥಾಲಯಗಳಲ್ಲಿ 2 ರಿಂದ 3 ಸಾವಿರ ಪುಸ್ತಕಗಳಿವೆ. ಅದರಲ್ಲಿ ಬಹುತೇಕ ಕಥೆ, ಕಾದಂಬರಿಗಳಿವೆ. ಅದರ ಜೊತೆಗೆ ಆಧುನಿಕ ಶಿಕ್ಷಣ ವ್ಯವಸ್ಥೆ, ಸ್ಪರ್ಧಾತ್ಮಕತೆಗೆ ಹೊಂದುವಂತಹ ಪುಸ್ತಕಗಳನ್ನು ನೀಡಿದರೆ ಯುವಕರಿಗೆ ಒಳ್ಳೆಯದಾಗುತ್ತದೆ ಎಂಬ ಉದ್ದೇಶದಿಂದ ಈ ಪುಸ್ತಕ ಹಂಚುವ ಯೋಜನೆ ಶುರು ಮಾಡಿದ್ದೇನೆ' ಎಂದರು.

'2021ರಲ್ಲಿ ನಮ್ಮ ಇಲಾಖೆಯಿಂದ ಪುಸ್ತಕ ಜೋಳಿಗೆ ಎಂಬ ಕಾರ್ಯಕ್ರಮ ಶುರು ಮಾಡಿ ದಾನಿಗಳಿಂದ ಪುಸ್ತಕಗಳನ್ನು ಸಂಗ್ರಹಿಸುವ ಅಭಿಯಾನ ಶುರುವಾಗಿತ್ತು. ಆಗಿನಿಂದಲೇ ನನ್ನಲ್ಲಿ ದೇಣಿಗೆ ರೂಪದಲ್ಲಿ ಪುಸ್ತಕಗಳನ್ನು ಏಕೆ ಕೊಡಬಾರದು ಎಂಬ ಚಿಂತನೆ ಶುರುವಾಗಿತ್ತು. ಆ ಚಿಂತನೆ ಕಾರ್ಯರೂಪಕ್ಕೆ ಬರುತ್ತಿದೆ' ಎಂದು ಅವರು ತಿಳಿಸಿದರು.

'ನನ್ನ ಕಾರ್ಯದಿಂದ ಸ್ಫೂರ್ತಿಗೊಂಡು ಇನ್ನಷ್ಟು ಜನ ಕೈಜೋಡಿಸಿದರೆ ಎಲ್ಲ ಪಂಚಾಯಿತಿಗಳ ವ್ಯಾಪ್ತಿಯಲ್ಲಿಯೂ ಇಂತಹ ಕಾರ್ಯ ಸುಲಭವಾಗಿ ಕೈಗೂಡಲಿದೆ. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೂ ಈ ಅಭಿಯಾನಕ್ಕೆ ಸ್ವಯಂಪ್ರೇರಿತವಾಗಿ ಕೈಜೋಡಿಸಿದರೆ ಭಾರಿ ಬದಲಾವಣೆ ತರಬಹುದು' ಎಂದರು.

### ₹5 ಲಕ್ಷ ವೆಚ್ಚದಲ್ಲಿ ತೆರೆದ ಗ್ರಂಥಾಲಯ

ನರೋಣಾ ಗ್ರಾಮದಲ್ಲಿ ₹ 5 ಲಕ್ಷ ವೆಚ್ಚದಲ್ಲಿ ತೆರೆದ ಗ್ರಂಥಾಲಯ ಸ್ಥಾಪಿಸುವುದಕ್ಕೆ ಅನುಮೋದನೆ ದೊರೆತಿದ್ದು, ಶೀಘ್ರ ಕಾಮಗಾರಿ ಆರಂಭವಾಗಲಿದೆ ಎನ್ನುತ್ತಾರೆ ತಾ.ಪಂ. ಇಒ ಮಾನಪ್ಪ ಕಟ್ಟಿಮನಿ.

'ದಿನದ 24 ಗಂಟೆಯೂ ಇದು ಕಾರ್ಯನಿರ್ವಹಿಸಲಿದೆ. ಗ್ರಂಥಾಲಯದಲ್ಲಿ ನಾಲ್ಕು ದುಂಡು ಮೇಜುಗಳನ್ನು ಇರಿಸಲಾಗುವುದು. ದಿನಪತ್ರಿಕೆಗಳು, ವಾರಪತ್ರಿಕೆ ಹಾಗೂ ಪ್ರಮುಖ ನಿಯತಕಾಲಿಕಗಳನ್ನು ಇರಿಸಲಾಗುವುದು' ಎಂದರು.

ನಮ್ಮ ಊರು ನಮ್ಮ ಜಿಲ್ಲೆ

# ‘ಶಿಕ್ಷಕರಿಗೆ ಬರೀ ವಿಷಯ ತಜ್ಞತೆ ಸಾಲದು’

ಪ್ರಜಾವಾಣಿ ವಾರ್ತೆ

**ಕಲಬುರಗಿ:** ‘ಉದಾತ್ತ ವೃತ್ತಿಗಳಲ್ಲೇ ಅಧ್ಯಾಪಕ ವೃತ್ತಿ ಶ್ರೇಷ್ಠವಾದುದು. ಶಿಕ್ಷಕರು ಬರೀ ಹುದ್ದೆಗಾಗಿ ಬೋಧಿಸದೆ ಮಕ್ಕಳ ಸರ್ವತೋಮುಖ ಬೆಳವಣಿಗೆಗಾಗಿ ಪಾಠ ಮಾಡಬೇಕು’ ಎಂದು ಧಾರವಾಡದ ವಾಗ್ಮಿ ಮಹೇಶ ಮಾಶಾಳ ಸಲಹೆ ನೀಡಿದರು.




ಕಲಬುರಗಿಯ ಶರಣಬಸವೇಶ್ವರ ವಸತಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಶಿಕ್ಷಕರಿಗಾಗಿ ಹಮ್ಮಿಕೊಂಡಿದ್ದ ಕಾರ್ಯಾಗಾರದಲ್ಲಿ ವಾಗ್ಮಿ ಮಹೇಶ ಮಾಶಾಳ ಅವರನ್ನು ಗೌರವಿಸಲಾಯಿತು

ನಗರದ ಶರಣಬಸವೇಶ್ವರ ವಸತಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಶಿಕ್ಷಕರಿಗಾಗಿ ಹಮ್ಮಿಕೊಂಡಿದ್ದ ‘ಪಾಂಡಿತ್ಯಪೂರ್ಣ ಮನಸ್ಥಿತಿಯೊಂದಿಗೆ ಕಲಿಸಿ’ (ಟೀಚ್ ವಿತ್ ಮಾಸ್ಟರ್‌ಫುಲ್ ಮೈಂಡ್‌ಸೆಟ್) ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

‘ಮಕ್ಕಳ ಸಬಲೀಕರಣಕ್ಕೆ ಶಿಕ್ಷಕ ವೃತ್ತಿ ಅವಕಾಶ ಎಂಬುದನ್ನು ಅರ್ಥೈಸಿಕೊಂಡು ಕಲಿಕೆಯಲ್ಲಿ ಹೃದಯ ವೈಶಾಲ್ಯ ತೋರಬೇಕು. ಮಕ್ಕಳನ್ನು ಅಂಕಗಳಿಗೆ ಸೀಮಿತಗೊಳಿಸದೆ ಅವರಿಗೆ ನಾಡು, ನುಡಿ, ಸಂಸ್ಕೃತಿ, ಪರಿಸರ, ಆರೋಗ್ಯ ಜತೆಗೆ ಬದುಕಿನ ಸೌಂದರ್ಯ ಕುರಿತು ಮನವರಿಕೆ ಮಾಡಿಸಬೇಕು’ ಎಂದರು.

‘ಜ್ಞಾನಕ್ಕೆ ಹಲವು ಮೂಲಗಳಿರುವುದರಿಂದ ಶಿಕ್ಷಕರು ಕೇವಲ ವಿಷಯ ತಜ್ಞರಾಗುವುದನ್ನು ಬಿಡಬೇಕು. ಶಿಕ್ಷಕರಾದವರು ತಮ್ಮ ವಿದ್ಯಾರ್ಥಿಗಳ ಮನಸ್ಸನ್ನು ಅರಿತು, ಬೋಧಿಸಬೇಕು. ಹೊಸ ತಲೆಮಾರಿನ ವಿದ್ಯಾರ್ಥಿಗಳು ಸ್ವಯಂ ಹೆಚ್ಚು ಜ್ಞಾನವುಳ್ಳವರಾಗಿದ್ದಾರೆ. ಅವರು ಬಯಸುವುದು ಬರೀ ಸಹಾನುಭೂತಿ ಮತ್ತು ತಿಳಿವಳಿಕೆಯನ್ನು ಮಾತ್ರ. ಹೀಗಾಗಿ ಶಿಕ್ಷಕರು ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿ ಉತ್ತಮ ಶಿಕ್ಷಕರೆನಿಸಿಕೊಳ್ಳಬೇಕು’ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಮೇಲ್ವಿಚಾರಕ ಶ್ರೀಶೈಲ ಹೊಗಾಡೆ, ‘ನಮ್ಮ ಸುತ್ತಲಿನ ಪ್ರಪಂಚ ವೇಗವಾಗಿ ಬದಲಾಗುತ್ತಿದೆ. ಅದರಂತೆಯೇ ವಿದ್ಯಾರ್ಥಿಗಳೂ ಕೂಡ. ನಾವು ಅವರನ್ನು ಸಂಪೂರ್ಣವಾಗಿ ಅರ್ಥೈಸಿಕೊಂಡು ಬೋಧಿಸಲು ಪ್ರಯತ್ನಿಸಬೇಕು’ ಎಂದು ಅವರು ಹೇಳಿದರು.

ಕಾರ್ಯಾಗಾರದಲ್ಲಿ ಎಸ್.ಬಿ.ಆರ್ ಕಾಲೇಜಿನ ಎಲ್ಲ ಉಪನ್ಯಾಸಕರು, ಎಸ್.ಬಿ.ಆರ್ ಪಬ್ಲಿಕ್ ಶಾಲೆಯ ಹಾಗೂ ಅಪ್ಪಾ ಪಬ್ಲಿಕ್ ಶಾಲೆಯ ಶಿಕ್ಷಕರು ಉಪಸ್ಥಿತರಿದ್ದರು.



Most Important Topics For

# Science & Technology

UPSC Prelims & Mains

# Tata Consumer ups F&B game with ₹7K cr acquisition

**ENS ECONOMIC BUREAU** @ New Delhi

TATA CONSUMER PRODUCT LTD has upped its food and beverages game with the acquisition of Capital Foods and Organic India at a cumulative price of ₹7,000 crore.

Tatas bought Capital Foods at an enterprise value of ₹5,100 crore, while Organic India, a wellness brand from Fab India group, at an enterprise value of ₹1,700 crore.

The acquisitions will be financed through a combination of cash reserves available with the company, debt and equity issuance through rights Issue or any other modes. Both the acquisitions are likely to be completed by March-end.

TCPL says that the two acquisitions have massive potential to drive synergies by leveraging Tata Consumer's distribution network, increasing scale along with scope to deliver significant operating



efficiencies. The company says that the acquisitions would add strong complementarity to its F&B (Food and Beverages) platforms and fill gaps in its product portfolio.

As per the Tata Group company, both Capital Foods and Organic India have strong portfolio of high margin products which could improve gross and EBIDTA margins of TCPL in the near-to-medium term. Capital Foods has strong umbrella platform brands with a portfolio of unique products for in-home consumption in fast growing categories. Ching's Secret is a market leader in Desi Chinese across its product categories - Chutneys, blended masalas, sauces and soups. Smith & Jones is a fast-growing brand catering to in-home cooking of Italian and other western cuisines. The overall size of the categories in which Capital Foods operates in is estimated at ₹21,400 crore.

As for Organic India, TCPL says its organic brand of F&B and herbal supplements products caters to booming, highly fragmented ₹82,000 crore market. Products of Organic India have omni-channel presence across GT (general trade) stores, e-comm platforms, own website and exports. Organic India is Rs 350 crore plus brand with high quality products focused on "sustainable living". The products have high gross margins of 55% and above.

# Kannada in Google Lookout

## The app converts images, videos into text and then turns the text into speech

SUNIL PATIL @ Belagavi

THE greens of the lush pastures, the pinks and reds of flowers, the blue of the skies and the colours of the world we live in are either a blur or simply absent in the eyes of the visually disabled. While they are shut from the hues of the world, keeping themselves updated of the things happening around them is impossible too. To bring the world to their fingertips, and to enable Kannada-speaking, visually disabled listen to Kannada newspapers and books, Siddalingeshwar Ingalagi from Bailhongal, Belagavi has striven hard for two years with Google. His efforts have not gone waste as Google is finally including Kannada in its 'Lookout Assisted Vision' Android app.




The 32-year-old Ingalagi, himself visually disabled, is a government employee who works as an Account Assistant at the taluk panchayat office in Bailhongal. He is known in the little town for his exceptional skills in handling technical infrastructure and software designed for helping visually impaired carry out their daily chores, like normal individuals. He went a step ahead when he contacted Google to provide their smart applications in regional languages, making them useful for the visually impaired in the country.

Setting out on a mission to include Kannada in the app, he contacted Google through the Google Disability Support Desk, while tweeting repeatedly on X and tagging the Google team. After two years of persistent effort, Google Disability Support team included Kannada in the 'Lookout' app on August 17, 2023. Ingalagi was a regular user of the app, but he knew that Kannada and other regional languages should be included to make the lives of people like him better.

The 'Lookout Assisted Vision' app can be used in smartphones that are equipped with a back camera. It converts images and videos into text and then converts the text into speech using the 'Text to Speech' (TTS) tool. The application throws open a window to the outside world for the visually impaired and enables them to listen to newspapers, books, know the denomination of currency notes and scripts on computers. The app was initially available only in English, Hindi and other widely used languages. Now, with Ingalagi's efforts, Kannada too has been included.

Speaking to *The New Sunday Express*, he said there are over two lakh visually impaired people in Karnataka. "I hope the inclusion of Kannada in the 'Lookout' app will ease their lives and help them accomplish their daily targets. It will now help them lead a self-reliant life," he said.




EXPRESS ILLUSTRATION

*The app throws open a window to the outside world for the visually impaired and enables them to listen to newspapers, books and know the denomination of currency notes*


— Siddalingeshwar Ingalagi

# IT stocks rally may be on wobbly legs

**UNCERTAIN.** That the gap between business trends and valuation is wider than ever suggests just this

**Hari Viswanath**
bl. research bureau

High correlation between headcount and business trends




Source: Bloomberg and company filings; FY24 data is based on YTD performance; Wipro data is only from FY13 based on available information

Hope is all around, especially if you were a tech sector investor last week, as IT stocks reacted positively to Infosys and TCS results, while Wipro ADR shot up 16 per cent on Friday (results came in after Indian markets closed). However, does this hope rally have legs to stand on?

Yes, results were in line (albeit on weak expectations), margin trends were better and attrition has declined considerably. But if one is not short of memory, one would recollect that in CY2022 business was booming, margins were falling short and attrition was at multi-year highs. So, as a corollary, based on better margins and low attrition this time, one can make an argument that underlying business trends are not as strong as the market reactions seem to be proposing.

During a slowdown, companies step up efficiencies, cut costs (including deferring hikes) to boost margins. Employees, mindful of the circumstances, are less likely to change jobs, resulting in reduced attrition. However, emphasising this aspect might overlook the broader picture. In the past 15 years, despite robust business performance and stock returns in IT services, margins have decreased from approximately 30 per cent for companies such as TCS and Infosys.

## ACTION, NOT WORDS

So, what can help affirm the underlying trend in the sector to get a holistic picture? Look at what managements are doing rather than saying. In this case, it is what they are doing about headcount. Analysis of data going back to nearly two decades, indicates a clear high correlation between headcount and business trends for IT services companies. The correlation in roughly the last two decades ranges from 0.96 to 0.99 for the top four4 Indian IT companies (see charts). So, if one were to go by this, given the headcount declines for Infosys, TCS, Wipro and HCLTech YTD in FY24, one may need to reassess whether the current rally can sustain. This is especially considering the fact that the gap between business trends and valuation is wider than ever.

For instance, for the large IT players, which have reported headcount declines YTD (which did not happen even during the 2008 slowdown), the PE ratio is very close to historical highs, while employee and revenue trends are at historical lows. What about productivity? During the previous decade, the IT services industry has made a successful transition from legacy business to a digital-focussed business. This transformation hasn't altered the correlation between business trends and headcount much.

## PRODUCTIVITY BUZZ

In fact, the employee productivity for companies has largely declined or stayed flat, barring Infosys, in the last 10 years. For instance, in the case of TCS productivity has declined from about $50,000 per employee in FY13 to $47,000 in FY23, while it stayed flat for HCLTech at $55,000 and Wipro at $41,000. Infosys saw improvement from $48,000 in 2013 to $55,000 now.

Volumes and currency depreciation have made up for the lack of improvement in productivity. And managements' own comments indicate AI is a potential long-term story rather than a case of any near-/mid-term game-changer.

In this context, it would be worth revisiting the hope rally in IT stocks that is characterised by historically high valuation amidst historically weak business trends. A quick turnaround *is not impossible, though looking at data, it does appear so.*

# Bengaluru cops launch 'ASTraM' to tame city's traffic

UDBHAVI BALAKRISHNA
BENGALURU, DHNS

Aiming to design effective data-powered traffic management strategies, the Bengaluru Traffic Police on Saturday launched ASTraM, a 'smart traffic engine', that will provide real-time congestion alerts to jurisdictional officers every 15 minutes, besides sending periodic congestion updates to various stakeholders.

The launch of ASTraM (Actionable intelligence for Sustainable Traffic Management) is among initiatives taken ahead of the National Road Safety Month from January 15 to February 14.

The engine includes dashboard analytics that will automatically tabulate traffic volume in metres (congestion length), vehicle count and type, safety and road conditions.

Besides this, a simulation and prediction tool trained with traffic flow over a period of time will predict congestion on different routes throughout the day. This will help police decide alternative routes to ensure smooth movement, especially when they plan traffic advisories for an event. Over time, this will help them draw a comparative analysis of traffic movement and congestion.

The engine will also include a bot enabling police to report any on-ground incidents, which will be used to relay real-time updates to road users, M N Anucheth, Joint Commissioner of Police (Traffic), told *DH*.



## Ambulance application

**Traffic police launched an ambulance application to ensure their hindrance-free movement. Ambulance drivers will alert the control room if they are stuck for more than 120 seconds so the police can identify the shortest obstacle-free route. The application includes an SOS button.**

# ಭಾರತದಲ್ಲಿ ಭಾರಿ ಹೂಡಿಕೆಗೆ ಟೆಸ್ಲಾ ಚಿಂತನೆ

**ನವದೆಹಲಿ:** ಕೇಂದ್ರ ಸರ್ಕಾರ ವಿದ್ಯುಚ್ಚಾಲಿತ ವಾಹನ (ಇ.ವಿ.) ಕುರಿತು ಹೊಸ ನೀತಿಯನ್ನು ರೂಪಿಸುವ ಹೊಸ್ತಿಲಲ್ಲಿರುವಾಗ ಭಾರತದಲ್ಲಿ 30 ಶತಕೋಟಿ ಡಾಲರ್ ಬಂಡವಾಳ ಹೂಡಲು ವಿಶ್ವದ ಶ್ರೀಮಂತ ಉದ್ಯಮಿ ಎಲಾನ್ ಮಸ್ಕ್ ಒಡೆತನದ ಟೆಸ್ಲಾ ಚಿಂತನೆ ನಡೆಸಿದೆ. ಮುಂದಿನ ಐದು ವರ್ಷಗಳಲ್ಲಿ ಅಪಾರ ಬಂಡವಾಳ ಹೂಡಲು ಟೆಸ್ಲಾ ಮುಂದಾಗಿದ್ದು ಸರ್ಕಾರದೊಂದಿಗೆ ಆಗಲೇ ಮಾತುಕತೆಗಳನ್ನು ನಡೆಸಿದೆ. ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ 30 ಶತಕೋಟಿ ಡಾಲರ್ ಬಂಡವಾಳವನ್ನು ಇ.ವಿ. ಕ್ಷೇತ್ರದಲ್ಲಿ ಹೂಡುವುದು ಟೆಸ್ಲಾ ಯೋಜನೆಯಾಗಿದೆ ಎಂದು ತಿಳಿದು ಬಂದಿದೆ. ಇ.ವಿ. ತಯಾರಿಕೆ ಕಾರ್ಖಾನೆ, ಬ್ಯಾಟರಿ ಮತ್ತು ಇತರ ಸಂಬಂಧಿತ ಕೈಗಾರಿಕೆಗಳ ಸ್ಥಾಪನೆಗೆ ಹಣವನ್ನು ಬಳಸಲಾಗುತ್ತದೆ ಎಂದು ಕಂಪನಿಯ ವ್ಯವಹಾರ ಯೋಜನೆ ಬಗ್ಗೆ ತಿಳಿದಿರುವ ಪ್ರತಿನಿಧಿಗಳು ತಿಳಿಸಿದ್ದಾರೆ. ಇದೇ ವೇಳೆ, ಭಾರತದಲ್ಲಿ ಸಣ್ಣ ಕಾರು ಉತ್ಪಾದನೆಯ ಕಾರ್ಖಾನೆಯೊಂದನ್ನು ಸ್ಥಾಪಿಸಲೂ ಟೆಸ್ಲಾ ಚಿಂತಿಸುತ್ತಿದೆ. ಎರಡು ವರ್ಷದಲ್ಲಿ ಮೊದಲ ಸಣ್ಣ ಕಾರನ್ನು ಹೊರ ತರುವುದು ಅದರ ಯೋಜನೆಯಾಗಿದೆ.

**ಬೀದರ್ ಜಿಲ್ಲೆ ಜನರಿಗೆ ಮಕರ ಸಂಕ್ರಾಂತಿ ಕೊಡುಗೆ * ವರ್ಚ್ಯುವಲ್ ಮೂಲಕ ಉದ್ಘಾಟಿಸಲಿದ್ದಾರೆ ಪ್ರಧಾನಿ ಮೋದಿ**

# ಆಕಾಶವಾಣಿ ಎಫ್ ಎಮ್ ಸ್ಟೇಷನ್ ಮಂಜೂರು: ಖೂಬಾ

ಸಂ.ಕ.ಸಮಾಚಾರ ಬೀದರ್

ಕೇಂದ್ರ ಸರ್ಕಾರ ಮಕರ ಸಂಕ್ರಾಂತಿ ಹಬ್ಬದ ಕೊಡುಗೆಯಾಗಿ ಬೀದರ್ ಜಿಲ್ಲೆಗೆ ಆಕಾಶವಾಣಿ ಎಫ್ಎಮ್ ಕೇಂದ್ರ ಮಂಜೂರು ಮಾಡಿದೆ.

ನನ್ನ ಸತತ ಪ್ರಯತ್ನಕ್ಕೆ ಮೋದಿ ಸರ್ಕಾರದಿಂದ ಸಂಕ್ರಾಂತಿ ಹಬ್ಬದ ಕೊಡುಗೆಯಾಗಿ ಬೀದರ್ ಜಿಲ್ಲೆಯಲ್ಲಿ ಅತಿ ಶೀಘ್ರವಲ್ಲಿ ಆಕಾಶವಾಣಿ ಎಫ್.ಎಮ್. ಕೇಂದ್ರ ಪ್ರಾರಂಭವಾಗಲಿದೆ ಎಂದು ಕೇಂದ್ರ ಮಂತ್ರಿ ಭಗವಂತ ಖೂಬಾ ಶನಿವಾರ ತಿಳಿಸಿದ್ದಾರೆ. ಬೀದರನಲ್ಲಿರುವ ದೂರದರ್ಶನ ಕೇಂದ್ರದಲ್ಲಿ 100 ಕಿಮಿ ಹರ್ಟ್ಜ್ ಸಾಮರ್ಥ್ಯವುಳ್ಳ ಎಫ್.ಎಮ್. ಕೇಂದ್ರಕ್ಕೆ ಪ್ರಧಾನ ಮಂತ್ರಿ ನರೇಂದ್ರ ಮೋದಿಜಿ ವರ್ಚುವಲ್ ಮೂಲಕ ಉದ್ಘಾಟಿಸಲಿದ್ದಾರೆ. ಈ ಎಫ್.ಎಮ್. ಕೇಂದ್ರ ಸಧ್ಯ ಮರು ಪ್ರಸಾರಣಾ ಕೇಂದ್ರವಾಗಿ ಕಾರ್ಯನಿರ್ವಹಿಸಲಿದೆ ಎಂದು



ಅವರು ಹೇಳಿಕೆಯಲ್ಲಿ ಸ್ಪಷ್ಟಪಡಿಸಲಿದ್ದಾರೆ. ಜಿಲ್ಲೆಗೆ ಎಫ್. ಎಮ್.ಕೇಂದ್ರ ತರಬೇಕೆಂದು ನಿರಂತರವಾಗಿ ಪ್ರಯತ್ನಿಸಿದ್ದೆ. ಈ ಕುರಿತು ಪತ್ರಿಕೆಯಲ್ಲಿ ಕೂಡ ವರದಿಯಾಗಿತ್ತು. ಎಫ್.ಎಮ್. ಕೇಂದ್ರದ ಮಂಜೂರಾತಿಗೆ ಅವಶ್ಯಕವಾಗಿರುವ ಎಲ್ಲಾ ಪ್ರಕ್ರಿಯೆಗಳು ಮುಗಿಸಿಕೊಂಡು, ಮಂಜೂರಾತಿ ಪಡೆದುಕೊಂಡಿದ್ದರ ಪರಿಣಾಮ, ಬರುವ ಒಂದೆರಡು ವಾರದೊಳಗೆ ಲೋಕಾರ್ಪಣೆಗೊಳ್ಳಲಿದೆ, ಜನತೆಯ ಆಸೆ ಈಡೇರಲಿದೆ ಎಂದು ಖೂಬಾ ತಿಳಿಸಿದ್ದಾರೆ.

## ಖಾಸಗಿ ಎಫ್ಎಮ್ ಕೇಂದ್ರಗಳು

ಸಧ್ಯ ಬೆಂಗಳೂರು ಆಕಾಶವಾಣಿ ಕೇಂದ್ರದಿಂದ ಪ್ರಸಾರವಾಗುವ ಎಲ್ಲಾ ಕಾರ್ಯಕ್ರಮಗಳು ಬೀದರನಿಂದ ಮರು ಪ್ರಸಾರಗೊಳ್ಳುತ್ತವೆ. ನಂತರ ಮುಂದಿನ ಕೆಲವೇ ದಿನಗಳಲ್ಲಿ ಬೀದರ್ ಕೇಂದ್ರದಿಂದ ಇಲ್ಲಿಂದಲೇ ಕಾರ್ಯಾರಂಭ ಮಾಡಲಿವೆ. ಖಾಸಗಿ ಎಫ್.ಎಮ್. ಕೇಂದ್ರಗಳು ಅದಕ್ಕೆ ಬೇಕಾದ ಸಿದ್ಧತೆ ಈಗಾಗಲೆ ನಮ್ಮಲ್ಲಿಯೆ ಮಾಡಿಕೊಳ್ಳಲಾಗುತ್ತಿದೆ ಎಂದು ಪ್ರತಿಪಾದಿಸಿದ ಕೇಂದ್ರ ಮಂತ್ರಿ ಖೂಬಾ ಖಾಸಗಿ ಎಫ್.ಎಮ್. ಚಾನೆಲ್‌ಗಳನ್ನು ಪ್ರಾರಂಭ ಮಾಡಲು ಸರ್ಕಾರಕ್ಕೆ ಮನವಿ ಮಾಡಲಾಗಿದೆ.

ರಿಲಯನ್ಸ್ ಎಫ್.ಎಮ್. ಹಾಗೂ ಇನ್ನೊಂದು ಚಾನೆಲ್ ಬೀದರನಿಂದ ಎಫ್. ಎಮ್. ಚಾನಲ್ ಪ್ರಾರಂಭಿಸಲು ಆಸಕ್ತಿ ತೋರಿವೆ, ಆದರೆ ಮೊದಲು, ಸರ್ಕಾರದ ಎಫ್.ಎಮ್. ಕೇಂದ್ರ ಪ್ರಾರಂಭವಾದ ಮೇಲೆ ಇವುಗಳ ಕಾರ್ಯಾರಂಭಕ್ಕೆ ಅವಕಾಶವಿರುತ್ತದೆ ಎಂದಿದ್ದಾರೆ.

ಬೀದರ್ ನಲ್ಲಿ ಎಫ್.ಎಮ್. ಕೇಂದ್ರ ಪ್ರಾರಂಭಕ್ಕೆ ಮಂಜೂರಾತಿ ನೀಡಿರುವ ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಗೆ, ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಅವರಿಗೆ ತಾವು ಧನ್ಯವಾದಗಳನ್ನು ಅರ್ಪಿಸುವುದಾಗಿ ಸಂಸದ ಭಗವಂತ ಖೂಬಾ ತಿಳಿಸಿದ್ದಾರೆ.

### ಸಂ.ಕ.ವಿಶೇಷ ವರದಿ

**ಈ ಎಫ್.ಎಮ್. ಮರು ಪ್ರಸಾರಣ ಕೇಂದ್ರದಿಂದ ಸ್ಥಳೀಯ ಕಲಾವಿದರಿಗೆ ಸ್ಥಳೀಯ ಉದ್ಯಮಗಳ ಪ್ರಚಾರಕ್ಕೆ, ಪ್ರಸರಣಕ್ಕೆ, ವೇಗದ ಮಾಹಿತಿ ಪ್ರಸರಣಕ್ಕೆ ತುಂಬಾ ಅನುಕೂಲವಾಗಲಿದೆ ಉದ್ಯಮದ ಜೊತೆಗೆ ನಮ್ಮ ಭಾಗದ ಕಲೆ, ಸಂಸ್ಕೃತಿ ಹಾಗೂ ಭಾಷೆಗೆ ಪ್ರಾಶಸ್ತ್ಯ ಸಿಗಲಿದೆ ಎಂದು ತಿಳಿಸಿದ ಅವರು ಕಳೆದ 10 ವರ್ಷಗಳಲ್ಲಿ ನಾನು ಸಂಸದನಾದ ಮೇಲೆ, ಹತ್ತಾರು ಹೊಸ ಯೋಜನೆಗಳು ಬೀದರ್ ಲೋಕಸಭಾ ಕ್ಷೇತ್ರಕ್ಕೆ ತಂದಿರುವೆ, ಅದರಲ್ಲಿ ಈ ಎಫ್.ಎಮ್. ಕೇಂದ್ರ ಕೂಡ ಒಂದಾಗಿದೆ. ನಾನು ಜಾರಿಗೆ ತಂದ ಯೋಜನೆಗಳ ಮೂಲಕ ಜನತೆ ತುಂಬಾ ಅನುಕೂಲ ಪಡೆದುಕೊಳ್ಳುತ್ತಿದ್ದಾರೆ, ಇದರಿಂದ ಸಂತೋಷವಾಗುತ್ತಿದೆ. ಮುಂದಿನ ದಿನಗಳಲ್ಲಿ ಮತ್ತೊಂದು ಹಂತಕ್ಕೆ ಬೀದರ್ ಜಿಲ್ಲೆಯ ಅಭಿವೃದ್ಧಿಯನ್ನು ಕೊಂಡೊಯಲಿದ್ದೇನೆ ಎಂದು ಖೂಬಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಬೀದರ್ ಜಿಲ್ಲೆಯಲ್ಲಿ ಎಫ್ಎಮ್ ಸ್ಟೇಷನ್ ಆರಂಭಿಸುವ ಅವಶ್ಯತಕೆ ಕುರಿತು 'ಸಂಯುಕ್ತ ಕರ್ನಾಟಕ' ಇತ್ತೀಚೆಗೆ ವಿಶೇಷ ವರದಿ ಪ್ರಕಟಿಸಿದ್ದುದ್ದು ಇಲ್ಲಿ ಉಲ್ಲೇಖನೀಯ.**


Fully Editable Text
Free Fonts Used
HEALTH

# Centre yet to take a call on beginning HPV vaccination campaign for girls

**The government's immunisation advisory group has recommended vaccination for girls as part of the universal immunisation programme; the WHO says the HPV vaccine is effective for the prevention of HPV serotypes 16 and 18**

**Bindu Shajan Perappadan**
NEW DELHI

The Union Health Ministry said on Saturday that it was yet to take a decision on starting a vaccination campaign against human papillomavirus (HPV), despite reports that it is set to offer the vaccine from the second quarter of this year. The National Technical Advisory Group for Immunisation (NTAGI) has recommended vaccination for adolescent girls between the ages of nine and 14.

The Ministry earlier said in June 2022 that after evaluating the fresh evidence on the cervical cancer burden and the effectiveness of a single dose of HPV vaccine, including clinical trial data and Sikkim's experience with the vaccine, the NTAGI recommended the vaccine's inclusion in the government's universal immunisation programme.

This would involve a one-time catch-up shot for girls in the nine-to-14 age group, followed by a routine introduction for others at the age of nine.




